International Journal of Kannada Research 2019; 5(1): 135-138

International Journal of Kannada Research
www.kannadajournal.com

ISSN: 2454–5813
IJKR 2019; 5(1): 135-138
© 2019 IJKR
www.kannadajournal.com
Received: 02-11-2018
Accepted: 05-12-2018

**ಡಾ. ಹೆಚ್.ಡಿ. ಉಮಾಶಂಕರ್**
ಸಹಾಯಕ ಪ್ರಾಧ್ಯಾಪಕರು
ಸ. ಪ್ರ. ದ. ಕಾಲೇಜು
ಕೆ. ಆರ್. ಪೇಟ

**Correspondence**
**ಡಾ. ಹೆಚ್.ಡಿ. ಉಮಾಶಂಕರ್**
ಸಹಾಯಕ ಪ್ರಾಧ್ಯಾಪಕರು
ಸ. ಪ್ರ. ದ. ಕಾಲೇಜು
ಕೆ. ಆರ್. ಪೇಟ

# ಕುವೆಂಪು ಅವರ ಜಲಗಾರ ನಾಟಕ : ಜೀವಪರ ನಿಲುವಿನ ಗಟ್ಟಿಧ್ವನಿ

**ಡಾ. ಹೆಚ್.ಡಿ. ಉಮಾಶಂಕರ್**

ಕನ್ನಡ ಸಾಹಿತ್ಯದಲ್ಲಿ ಜೀವಪರ ಮಿಡಿತದ ಸದ್ದು ಕೇಳಿಸುವಂತೆ ರಚಿಸಿರುವ ಬಹುಮುಖ್ಯ ಸಾಹಿತಿಗಳಲ್ಲಿ ಕುವೆಂಪು ಮೊದಲಿಗರು. ಇಂಡಿಯಾದಂತಹ ಜಾತಿ ಕೂಪದ ದೇಶದಲ್ಲಿ ಜೀವಪರ ನಿಲುವುಗಳು ಹಿನ್ನೆಲೆಗೆ ಸರಿಯುತ್ತಿರುವ ಸಂದರ್ಭದಲ್ಲೆಲ್ಲ ಹಲವು ಮಹನೀಯರು ಇದನ್ನು ಎಚ್ಚರಿಸುವ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಇದು ಮಾತಿನಲ್ಲಿರಬಹುದು, ಕೃತಿಯಲ್ಲಿರಬಹುದು, ಹೇಳಿಕೆಯಲ್ಲಿರಬಹುದು, ಕತೆಗಳ ಮೂಲಕವೂ ಇರಬಹುದು. ಜಾತಿಯ ಮೂಲಕ ಮಾನವ ವಿರೋಧಿ ಅಂಶಗಳು ಮೇಲುಗೈ ಸಾಧಿಸಿದಂತೆಲ್ಲಾ ಇಂತವರ ಮಾತುಗಳು ಮದ್ದಾಗಿ ಜನಮಾನಸದಲ್ಲಿ ಕೆಲಸ ಮಾಡಿವೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಚಿಂತನೆಗಳು ಮಹತ್ವದವು. ತನ್ನ ಒಟ್ಟು ಸಾಹಿತ್ಯದೊಳಗೆ ಸರ್ವರನ್ನು ಸಮಾನವಾಗಿ ಕಾಣುವ ದೃಷ್ಟಿಕೋನವನ್ನು ಅವರು ಬಿತ್ತಿದ್ದಾರೆ. ಈ ನಿಟ್ಟಿನಲ್ಲಿ 'ಜಲಗಾರ' ನಾಟಕ ಅತ್ಯಂತ ಮಹತ್ವದ್ದು.

ಕನ್ನಡದ ನಾಟಕಗಳಿಗಿಂತ ಭಿನ್ನವಾಗಿ ಹೊಸದೆನ್ನುವಂತೆ ವಸ್ತು, ನಿರೂಪಣಾಕ್ರಮ, ಭಾಷೆಯನ್ನು ತಮ್ಮ ನಾಟಕಗಳಲ್ಲಿ ಕುವೆಂಪು ತಂದಿತ್ತರು. ಈ ಮೂಲಕ ಹೊಸದೊಂದು ನೋಟವನ್ನೂ ಸಾಹಿತ್ಯಕ್ಕೆ ಕೊಡುಗೆಯಾಗಿ ಕೊಟ್ಟರು. ಇದರಿಂದಾಗಿ ಅಂಚಿನ ಸಮುದಾಯಗಳು ಪ್ರಧಾನ ಪಾತ್ರಗಳಾಗಿ ಅವರ ಕೃತಿಗಳಲ್ಲಿ ನೆಲೆನಿಲ್ಲಲು ಸಾಧ್ಯವಾಯಿತು. ಲೋಕದ ಸಮಷ್ಟಿಯಲ್ಲಿ 'ತನ್ನ ಪಾಡು ತನ್ನದು, ಬೇರೆಯವರ ಕತೆಯೇಕೆ' ಎನ್ನುವ ಧೋರಣೆ ಕುವೆಂಪು ಅವರಿಗೆ ಕೊಂಚವೂ ತಾಕಿದಂತೆ ಕಾಣುವುದಿಲ್ಲ. 'ಲೋಕದ ಸಮಷ್ಟಿಯಲ್ಲಿ ಎಲ್ಲವೂ... ಎಲ್ಲರೂ ಮುಖ್ಯ' ಎಂಬುದೇ ಅವರೊಳಗೆ ದೊಡ್ಡ ಧೋರಣೆಯಾಗಿ ಕೆಲಸ ಮಾಡಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಬಹುಮುಖ್ಯ ನೆಲೆಗಟ್ಟೂ ಹೌದು. ಸ್ವಾತಂತ್ರ್ಯ ಪೂರ್ವದಲ್ಲಿ ಅವರ ಮೊದಲ ನಾಟಕವಾಗಿ ಪ್ರಕಟಗೊಂಡ 'ಜಲಗಾರ'ದಲ್ಲಿ ಇದೆಲ್ಲ ಅಚ್ಚೊತ್ತಿದಂತೆ ಕಾಣುತ್ತದೆ.

ಈ ನಾಟಕದ ಹೆಸರೇ ಜಲಗಾರ. ಹೆಸರಿಲ್ಲದ ಜಲಗಾರ. ದುಡಿಮೆಯ ನೆಲೆಯನ್ನೇ ಪ್ರಧಾನವಾಗಿ ಹೊದ್ದುನಿಂತ ಜೀವಿ ಇವನು. ೧೨ ನೇ ಶತಮಾನದಲ್ಲಿ ಕಾಯಕವನ್ನೇ ಉಸಿರಾಗಿಸಿಕೊಂಡ ಕಾಯಕ ಜೀವಿಗಳು ಅದರಲ್ಲೇ ಕೈಲಾಸ ಕಂಡರು. ತಮ್ಮೆಸರಿನ ಜೊತೆಗೆ ತಮ್ಮ ಕಾಯಕವನ್ನೂ ಸೇರಿಸಿಕೊಳ್ಳುವುದರ ಮೂಲಕ ಎಲ್ಲ ಕಾಯಕಕ್ಕೂ ಆತ್ಮಾಭಿಮಾನವನ್ನು ತುಂಬಿ ಸಮಾನ ನೆಲೆಗೆ ಇಂಬು ಕೊಟ್ಟರು. 'ಎಲ್ಲರೂ ಒಂದೇ ಎನ್ನುವ' ಮೂಲಕ ಆ ಕಾಲದಲ್ಲೇ ದೊಡ್ಡ ಚಳವಳಿಯನ್ನೂ ನಡೆಸಿದರು. ಇದರ ಮುಂದುವರಿದ ಭಾಗದಂತೆ 'ಜಲಗಾರ' ನಮಗೆ ಕಾಣಸಿಗುತ್ತಾನೆ. ಭಾರತದ ಜಾತಿ ವ್ಯವಸ್ಥೆಯ ವಿವಿಧ ಆಯಾಮವನ್ನು ಪ್ರಶ್ನಿಸುವ ಇವನು ಇಲ್ಲಿನ ವರ್ಣ, ಜಾತಿ ಅಸಮಾನತೆ ನೆಲೆಗಳಿಗೆ ತನ್ನದೇ ರೀತಿಯಲ್ಲಿ ಮುಖಾಮುಖಿಯಾಗುತ್ತಾನೆ.

'ಕರ್ಮವಾರಾಧನೆ, ಸೇವೆಯೇ ಪೂಜೆ.' ಇದು ಜಲಗಾರನ ಗಟ್ಟಿ ನಿಲುವು. ಇದನ್ನು ನಂಬಿಯೇ ಅವನು ತನ್ನ ಕಾಯಕದಲ್ಲಿ ತಲ್ಲೀನ. 'ನನ್ನ ಭಾಗಕೆ ಪೊರಕೆ ಆರತಿ. ಗುಡಿಸುವುದೆ ನನ್ನ ದೇವರ ಪೂಜೆ' ಇದು ಅವನ ಅಗಾಧ ನಂಬಿಕೆ. ಪೊರಕೆಯನ್ನು ಆರತಿಯನ್ನಾಗಿ ಮಾಡಿಕೊಂಡು, ಗುಡಿಸುವುದರ ಮೂಲಕವೇ ದೇವರ ಪೂಜೆ ಮಾಡುವ ಈ ಪರಿಕಲ್ಪನೆ ಕನ್ನಡ ಸಾಹಿತ್ಯಕ್ಕಷ್ಟೇ ಅಲ್ಲ ಇಲ್ಲಿನ ಸಂಸ್ಕೃತಿಗೇ ಹೊಸದು. ಈ ನಂಬಿಕೆ ಪೊಳ್ಳು ಆದರ್ಶದಿಂದ ಬಂದದ್ದಲ್ಲ. ತನ್ನ ಜೀವನದಲ್ಲಿ ಅವನೇ ಕಂಡುಕೊಂಡ ಬಹು ಅಮೂಲ್ಯ ಮೌಲ್ಯಗಳಿವು. ಭಾರತದಂತಹ ಅಸಮಾನತೆಯ ನಂಬಿಕೆಗಳಲ್ಲಿ ಮುಳುಗಿರುವ ಜಗತ್ತಿನಲ್ಲಿ ಇಂತಹ ಮೌಲ್ಯಗಳನ್ನು ಹೇಳುವುದೂ ಕೂಡ ಅತ್ಯಂತ ಅಪಾಯಕಾರಿ! ಆದರೆ ಕುವೆಂಪು ಜಲಗಾರನ ಮೂಲಕ ಇದನ್ನು ಹೇಳಲಿಕ್ಕೆ ಯಾವ ಹಿಂಜರಿಕೆಯನ್ನೂ ಹೊಂದಿದಂತೆ ಕಾಣುವುದಿಲ್ಲ. 'ಸತ್ಯ ಹೇಳುವುದಕ್ಕೆ ಹಿಂಜರಿಕೆ ಯಾಕೆ' ಎನ್ನುವ ಮನೋಭಾವ ಅವರಿದ್ದಿರಬೇಕು!

ಜಲಗಾರ ನಾಟಕದಲ್ಲಿ ಎರಡು ಸುದೀರ್ಘ ದೃಶ್ಯಗಳಿವೆ. ಜಲಗಾರ, ರೈತ, ಯುವಕರು, ಕುರುಡರು, ಹುಡುಗಿ, ಪಾರ್ವರು, ಕಬ್ಬಿಗ ಮತ್ತು ಯುವಕರ ಪಾತ್ರಗಳು ಈ ನಾಟಕದಲ್ಲಿ ಸಂಭಾಷಿಸುತ್ತವೆ. ಇಲ್ಲಿನ ಯಾವ ಪಾತ್ರಗಳಿಗೂ ಇಟ್ಟ ಹೆಸರುಗಳಿಲ್ಲ. ಅವುಗಳ ಅಸ್ತಿತ್ವವನ್ನೇ ಬಳಸಿ ಹೆಸರುಗಳನ್ನಿಡಲಾಗಿದೆ. ರೈತ ಮತ್ತು ಜಲಗಾರನ ಹೆಸರುಗಳು ದುಡಿಮೆಯ ನೆಲೆಯನ್ನು ಬಿಂಬಿಸಿದರೆ ಇನ್ನಿತರ ಹೆಸರುಗಳು ಸಮೂಹ ಸಂಕೇತವಾಗಿ ನೆಲೆ ನಿಂತಿವೆ. ಒಂದು ರೀತಿಯಲ್ಲಿ ಅನ್ವರ್ಥನಾಮವೆಂದರೂ ತಪ್ಪಿಲ್ಲ. ಒಂದೊಂದು ಪಾತ್ರವೂ ತನ್ನೆಸರಿಗೆ ತಕ್ಕ ಹಾಗೆ ಇಲ್ಲಿ ನಿರೂಪಿತಗೊಳ್ಳುತ್ತವೆ. ಇದರೊಂದಿಗೆ ಪ್ರಕೃತಿಯ ಚರಾಚರವೂ ಇಲ್ಲಿ ಪಾತ್ರಗಳಾಗಿ ನೆಲೆನಿಂತಿವೆ. ಪ್ರಕೃತಿಯ ಪ್ರತಿಯೊಂದು ಚಲನ ವಲನವೂ ಕುವೆಂಪು ಅವರಿಗೆ ಬಹಳ ಮುಖ್ಯ. ಅಷ್ಟೊಂದು ತಲ್ಲೀನತೆ ಅವರದ್ದು. ಈ ಕವಿಯ ಕಣ್ಣು ಎಷ್ಟು ಸೂಕ್ಷ್ಮ ಎಂದರೆ ಸಮಷ್ಠಿಯ ಒಂದು ಸಣ್ಣ ಮಿಟುಕೂ ಕೂಡ ಅವರ ಕಣ್ಣಿನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಈ ಗುಣದಿಂದಾಗಿಯೇ ಕುವೆಂಪುವಿಗೆ ಪ್ರಕೃತಿಯ ಚೇತನಾಚೇತನ ವಸ್ತುಗಳೆಲ್ಲ ಪಾತ್ರಗಳೆ ಆಗಿ ನೆಲೆ ನಿಲ್ಲುವಂತೆ ಮಾಡುವ ಗುಣ ರಕ್ತಗತವಾಗಿಬಿಟ್ಟಿದೆ. ಇನ್ನೂ ಮುಂದುವರಿದು ಹೇಳುವುದಾದರೆ ಅವರ ಎಲ್ಲ ವೈವಿಧ್ಯಮಯ ಬರೆಹಗಳಲ್ಲಿ ಪ್ರಕೃತಿಯೇ ಒಂದು ದೈವವಾಗಿ ನೆಲೆ ನಿಂತಿರುವುದು ಸೋಜಿಗವೇ ಸರಿ! ಇಂತಹ ದೈವದಲ್ಲಿ ಅವರಿಗೆ ಎಲ್ಲರೂ ಸಮಾನರು. ಇದರಿಂದಾಗಿಯೇ ಅವರಿಗೆ ಇಲ್ಲಿ 'ಯಾವುದೂ ಮುಖ್ಯವಲ್ಲ; ಯಾವುದೂ ಅಮುಖ್ಯವಲ್ಲ'.

> ಬನದ ಕೆಂದಳಿರಲ್ಲಿ ಬಗ್ಗಿಸುವ ಕೋಗಿಲೆಯೆ,
> ನಿನ್ನ ಪುಗಿಲಿಂಚರದಿ ಪರಮವಾಣಿಯ ಕೇಳದವಗೆ ಕಿವಿಯಿದ್ದರೇಂ?
> ಎಲೆ ರಮ್ಯವನಗಳಿರ, ನಿಮ್ಮ ಸೌಂದರ್ಯದಲಿ
> ಪರಮಾತ್ಮನಂ ಕಾಣದವಗಿದ್ದರೇಂ ಕಣ್ಣೆರಡು?
> ಜಗದ ದೇಗುಲದಲ್ಲಿ ಜಗದುದಯ ಕಾರಣನ
> ಕಾಣದವನೆಂತು ಕಾಣ್ಬನು ಶಿವನ, ಗುಡಿಯಲ್ಲಿ?

ಜಗತ್ತನಲ್ಲಿ ದೇವರನ್ನು ಸ್ಥಾವರಗೊಳಿಸಿ, ಅದರ ಸುತ್ತ ನಂಬಿಕೆಗಳ ಹುತ್ತವನ್ನು ಬೆಳೆಸಿ, ತಮ್ಮ ಬೇಳೆಯನ್ನು ಸದಾ ಬೇಯಿಸಿಕೊಳ್ಳುತ್ತದ್ದ ಜನತೆಗೆ ಇದಕ್ಕಿಂತ ದೊಡ್ಡ ಪೆಟ್ಟು ಬೇಕಿಲ್ಲ. ಮೊದಲ ಬಾರಿಗೆ ದೇವರನ್ನು ಜಂಗಮಗೊಳಿಸಿ ಬಯಲಿಗೆ ತಂದದ್ದು ವಚನಕಾರರು. ಇದರ ಮುಂದುವರಿದ ಭಾಗದಂತೆ 'ಜಲಗಾರ' ನಾಟಕದಲ್ಲಿನ ಜಲಗಾರ ತನ್ನ ದೇವರನ್ನು ಪ್ರಕೃತಿಯ ಇಂಚಿಂಚಿನಲ್ಲೂ ಗುರುತಿಸುವ ಪ್ರಯತ್ನ ಮಾಡುತ್ತಾನೆ. ಅವನು ದೇವರ ಆರಾಧನೆಗೆ ಬೇಕಾಗಿರುವ ಪಂಚಪಾತ್ರೆ, ತೀರ್ಥ, ಧೂಪ, ಸುಸ್ವರಮೇಳ ಎಲ್ಲವನ್ನು ಈ ಪ್ರಕೃತಿಯ ಮಗ್ಗಲುಗಳಿಂದಲೇ ಪಡೆದುಕೊಂಡು ತನ್ನ ದೇವರನ್ನು ತನ್ನೊಳಗೇ ಆರಾಧಿಸುತ್ತಾನೆ. ಗುಡಿಯಲ್ಲಿದ್ದ ದೇವರನ್ನು ಅಂಗೈಯೊಳಗೆ ತಂದಿಟ್ಟು ತನಗಿಷ್ಟ ಬಂದಂತೆ ಪೂಜೆ ಮಾಡಿಕೋ ಎಂದ ವಚನಕಾರರ ಅಪ್ಪಟ ಪ್ರಭೆಯಂತೆ ಇಲ್ಲಿನ ಜಲಗಾರ ಕಂಡುಬರುತ್ತಾನೆ.

ಕುವೆಂಪು ಅವರ ಆರಾಧ್ಯ ದೈವವಾದ ಪ್ರಕೃತಿಯ ಚಲನೆಯ ಮೂಲಕವೇ ನಾಟಕ ಆರಂಭಗೊಳ್ಳುತ್ತದೆ. ಮುಂದೆ ಜಲಗಾರ ಕಸ ಗುಡಿಸುತ್ತಿರಬೇಕಾದರೆ ರೈತನೊಬ್ಬ ಅದೇ ದಾರಿಯಲ್ಲಿ ಶಿವಗುಡಿಯ ಜಾತ್ರೆಗೆ ಹೋಗುವ ಸನ್ನಿವೇಶದ ಮೂಲಕ ಇಲ್ಲಿ ಸಂಭಾಷಣೆ ಪ್ರಾರಂಭವಾಗುತ್ತದೆ. ಇಲ್ಲಿ ಮೊದಲಿಗೆ ಎರಡು ಪಾತ್ರಗಳು ಮುಖಾಮುಖಿಯಾಗುತ್ತವೆ. ಅದೂ ಎಂತಹ ಪಾತ್ರಗಳು! ಒಂದು ರೈತ; ಅವನೆಂದರೆ, ದೊರೆಗಳಾಳಲು, ರಣವೀರರು ಬಾಳಲು, ಕಬ್ಬಿಗರು ನಲ್ಲಬ್ಬಗಳ ಬರೆಯಲು, ಶಿಲ್ಪಿಗಳು ಕೆತ್ತನೆ ಮಾಡಲು, ಇನ್ನು ಹಲವು ಜೀವಿಗಳು ಉಸಿರಾಡಲು ತನ್ನ ಬಲದಿಂದ ಅನ್ನವನ್ನು ಬೆಳೆದು ಅನ್ನ ನೀಡಿದ ಮಹಾ ಮಾನವತಾವಾದಿ ಅವನು. ಇನ್ನೊಬ್ಬ ಜಗದ ಕಸ ಗುಡಿಸಿ ನಿರ್ಮಲಗೊಳಿಸುವ ಜಲಗಾರ. ಇಂತಹ ಪಾತ್ರಗಳ ಮುಖಾಮುಖಿಯ ಮೂಲಕವೇ ನಾಟಕರಾರು ಇಂದು ಯಾರ್‍ಯಾರು ಒಂದಾಗಿ ಹೆಜ್ಜೆ ಹಾಕಬೇಕೆಂಬ ಸಂದೇಶವನ್ನೂ ಸಾರಿದಂತೆ ಕಾಣುತ್ತದೆ. ಇಲ್ಲಿ ರೈತ ದೇವರನ್ನು ಹುಡುಕುತ್ತಾ ಗುಡಿಯೆಡೆಗೆ ಹೊರಟಿದ್ದಾನೆ. ಇವನನ್ನು ಮಾತನಾಡಿಸುವುದರ ಮೂಲಕ ಜಲಗಾರ ತನ್ನ ಒಳಮನಸ್ಸನ್ನು ತೆರೆಯುತ್ತಾನೆ. 'ಶಿವನ ಕಾಣಲು ಗುಡಿಗೆ ಹೋಗುವಿಯೇನು? ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು?' ಎಂದು ಕೇಳುವುದರ ಮೂಲಕ ಜಲಗಾರ ತನ್ನ ಮೊದಲ ಪಾಠವನ್ನು ರೈತನಿಂದಲೇ ಪ್ರಾರಂಭಿಸುತ್ತಾನೆ. ಕೊನೆಗೂ ಗುಡಿಗೇ ಹೋಗಲು ಉತ್ಸುಕನಾಗಿದ್ದ ರೈತನ್ನನು ಕಂಡು 'ಜಲಗಾರನೆಂದುದಿದು ವೇದ ನುಡಿಯಲ್ಲ, ತೆರಳು' ಎನ್ನುವುದರ ಮೂಲಕ ಅವನನ್ನು ಬೀಳ್ಕೊಡುತ್ತಾನೆ. 'ದೇವರ ಇರವನ್ನು ಇವನು ಅರಿಯ' ಎಂದುಕೊಂಡ ರೈತ 'ಹುಟ್ಟುಗುಣ ಸುಟ್ಟರೂ ಹೋಗುವುದೆ?' ಎನ್ನುತ್ತಾ ದೇಗುಲದೆಡೆಗೆ ಹೊರಳುತ್ತಾನೆ. ಇಲ್ಲಿ ತಳಸಮುದಾಯಗಳ ಆಲೋಚನೆಗಳಿಗೆ, ಚಿಂತನೆಗಳಿಗೆ ಬೆಲೆಯಿಲ್ಲ ಎಂಬುದನ್ನು ನಾಟಕ ಈ ಮೂಲಕ ಎತ್ತಿ ತೋರಿಸುತ್ತಾ; ಅದರೊಳಗಿನ ಸತ್ವದ ಕಡೆಗೂ ದೃಷ್ಟಿ ಹಾಯಿಸುತ್ತಾ ಇಲ್ಲಿನ ಸಮಾಜದ ಹಲವು ಮಗ್ಗಲುಗಳನ್ನು ಇದು ಹಿಡಿದಿಡುತ್ತದೆ.

ಮತ್ತೆ ನಾಟಕ ಜಲಗಾರನ ಹಾಡಿನ ಮೂಲಕ ಮುಂದುವರಿಯುತ್ತದೆ. ತನ್ನ ಕಾಯಕದೊಂದಿಗೆ ಮತ್ತೆ ಅವನು ಹಾಡಲು ಪ್ರಾರಂಭಿಸುತಾನೆ. ಇಲ್ಲೊಂದು ಸೂಕ್ಷ್ಮತೆಯನ್ನು ಗಮನಿಸಬೇಕು. ಕಲೆ ಯಾರ ಮನೆಯ ಸ್ವತ್ತೂ ಅಲ್ಲ; ಅದು ಎಲ್ಲರ ಸ್ವತ್ತು. ಕೆಲವರ ಕಲೆಗೆ ವಿಶ್ವಮಾನ್ಯತೆ; ಇನ್ನೂ ಕೆಲವರ ಕಲೆಗೆ ಕಿಂಚಿತ್ತೂ ಬೆಲೆ ಇಲ್ಲ. ಇದು ಈ ದೇಶದ ದುರಂತ. ಎಷ್ಟೋ ಅಂಚಿನ ಸಮುದಾಯಗಳು ತಮ್ಮ ಪಾಡಿಗೆ ತಾವು ಹಾಡಿಕೊಂಡು, ಕುಣಿದುಕೊಂಡು, ಕತೆಗಳನ್ನು ಕಟ್ಟಿಕೊಂಡು ಅದನ್ನು ತನ್ನವರಿಗೆ ಹೇಳಿಕೊಳ್ಳುತ್ತಾ ಬದುಕು ಸಾಗಿಸುತ್ತಾ ಬಂದಿವೆ. ಇವರಿಗೆ ಯಾವ ಬಿರುದು ಬಾವಲಿಗಳೂ ದಕ್ಕೇ ಇಲ್ಲ. ಆದರೆ ತಮ್ಮ ಕಲೆಯನ್ನೇ ಶ್ರೇಷ್ಟವೆಂದು ಕೊಂಡಾಡಿಕೊಂಡವರು ವಿಶ್ವಮಾನ್ಯರಾಗಿ ಪ್ರಸಿದ್ಧಿ ಪಡೆದಿದ್ದು ನಮ್ಮ ಕಣ್ಣುಗಳ ಮುಂದೆಯೇ ಇದೆ. ಇದನ್ನು ನಾಟಕದ ಒಂದು ಸನ್ನಿವೇಶ ಅದ್ಭುತವಾಗಿ ಸೆರೆಹಿಡಿದಿದೆ. ಜಲಗಾರ ಹಾಡುತ್ತಿರುವಾಗ ಅಲ್ಲಿಗೆ ಬಂದ ಪಾರ್ವರಿಬ್ಬರು ಹಾಡನ್ನು ಕೇಳಿ ಸಂತೋಷಪಟ್ಟರೂ ಕೊನೆಗೆ ಹಾಡಿದವನು ಜಲಗಾರನೆಂದು ತಿಳಿದು 'ಅಷ್ಟೇನೂ ಹಾಡು ಇಂಪಾಗಿರಲಿಲ್ಲ' ಎನ್ನುವುದರ ಜೊತೆಗೆ 'ಗಾನದೇವಿಯು ಹೀನ ಜಲಗಾರನನ್ ಒಲಿಯುವಳೆ? ಎನ್ನುವ ನಿರ್ಧಾರಕ್ಕೂ ಬಂದು 'ಶೂದ್ರರೊಳ್ ಕವಿವರ್ಯರುದಿಸುವರೆ? ಹುಟ್ಟುವರೆ ಪಂಡಿತರ್? ಜನಿಸುವರೆ ಶಿಲ್ಪಿಗಳ್? ಗಾಯಕರ್? ಯೋಗಿಗಳ್? ಅಸದಳಂ!' ಎನ್ನುವ ತೀರ್ಮಾನವನ್ನೂ ಪ್ರಕಟಿಸಿ ಮುನ್ನಡೆಯುತ್ತಾರೆ. ಪಾರ್ವರ ಅನಾದಿ ಕಾಲದಿಂದ ತುಂಬಿರುವ ಕಸದ ರಾಶಿಯ ತಲೆಯನ್ನು ಈ ಮೂಲಕ ತಮಗೇ ಗೊತ್ತಿಲ್ಲದಂತೆ ಪ್ರದರ್ಶಿಸಿ ಬಿಡುತ್ತಾರೆ. ಈ ಘಟನೆ ಸಾವಿರಾರು ವರ್ಷಗಳ ಕಾಲ ಇನ್ನೊಬ್ಬರ ಪ್ರತಿಭೆಯನ್ನು ಹೀನವೆಂದು ಪರಿಗಣಿಸುತ್ತಾ ತಮ್ಮದನ್ನು ಮಾತ್ರ ಶ್ರೇಷ್ಟವೆಂದು ಬೀಗುತ್ತಾ ಅಸಮಾನತೆಯನ್ನೇ ಉಸಿರಾಗಿಸಿಕೊಂಡ ಜನಾಂಗದ ಒಳಮನಸ್ಸಿನ ಬೇಗುದಿ ಇಲ್ಲಿ ಸಹಜವೆಂಬಂತೆ ನಿರೂಪಿತಗೊಂಡಿದೆ.

ಮುಂದಿನ ದೃಶ್ಯದಲ್ಲಿ ಕಾಣಿಸುವ ಇಬ್ಬರು ಯುವಕರು ಮೊದಲಿಗೆ ಪ್ರಗತಿಪರರಂತೆ ಕಾಣುತ್ತಾರೆ. ಇದಕ್ಕೆ ಕನ್ನಡಿ ಹಿಡಿದಂತೆ ದೇವಾಲಯವನ್ನು ಕುರಿತು 'ಮೊದಲ ಠಕ್ಕನು ಮೊದಲ ಬೆಪ್ಪನಂ

ಸಂಧಿಸಲು ಸಂಭವಿಸಿತೆಂಬರೀ ಮತ ಎಂಬ ಮತಿವಿಕಾರಂ, ದೊರೆ ಪುರೋಹಿತರ್ ಅವಳಿ ಮೊಲೆಯೂಡಿ ಸಲಹಿದರದಂ' ಎನ್ನುವ ಸಾರ್ವತ್ರಿಕ ಸತ್ಯವನ್ನು ಮಂಡಿಸುತ್ತಾರೆ. ಇದಕ್ಕು ಮೊದಲು ಮುಟ್ಟಿದ ತಪ್ಪಿಗಾಗಿ ಭಟ್ಟನಿಂದ ಬೈಸಿಕೊಂಡ ತಿರುಕ 'ಗುಡಿಗಳಿವು ಪಾಪಿಗಳ ಭೋಗಿಗಳ ಗೂಡುಗಳು! ಇಲ್ಲೇಕೆ ಪರಮಾತ್ಮ ಸೇರಿರುವೆ' ಎನ್ನುತ್ತಾ ತನ್ನ ಕಾಯಕಕ್ಕೆ ಮುಂದಾಗುತ್ತಾನೆ. ಇಷ್ಟರ ಮಟ್ಟಿಗಿನ ವೈಚಾರಿಕ ನಿಲುವು ಇಬ್ಬರದು. ಉಸಿರಾಡುವ ಪ್ರತಿಯೊಬ್ಬರಲ್ಲೂ ಈ ತರದ ಮಾನವೀಯ ವೈಚಾರಿಕತೆ ಇರುತ್ತದೆ ಎಂಬುದಕ್ಕೆ ಈ ಮಾತುಗಳು ಸಾಕ್ಷಿ. ಆದರೆ ಕೆಲವೊಮ್ಮೆ ವೈಚಾರಿಕರು ನಾವೆಂದುಕೊಳ್ಳುವ ಯುವಕರು ಮಾಡುವ ಪ್ರಮಾದ ಬಹಳ ದೊಡ್ಡದು. ಇದಕ್ಕೆ ನಿದರ್ಶನವೆಂಬಂತೆ ಅವರು ಕುರುಡನನ್ನು ನಡೆಸಿಕೊಂಡ ರೀತಿ ಅಮಾನವೀಯತೆಯೇ ಸರಿ!. ಅವರಿಗೆ ಸಹಾಯ ಮಾಡುವ ಮನಸ್ಸಿದೆ; ಆದರೂ ಗೊಂದಲವಿದೆ. ಇದಕ್ಕೆ ತಕ್ಕಂತೆ ನಾಟಕದಲ್ಲಿ ಕಣ್ಣಿಲ್ಲದ ತಿರುಕನನ್ನು ಅವರು ಪರೀಕ್ಷಿಸುವ ರೀತಿ ಅತ್ಯಂತ ಭಯಾನಕವಾದುದು. ವೈಚಾರಿಕತೆಯ ಜೊತೆಗೆ ಒಳಕರುಳಿನ ತುಡಿತವೂ ಇರಬೇಕೆಂದು ಈ ಘಟನೆ ಒತ್ತಿ ಒತ್ತಿ ಹೇಳುತ್ತದೆ. ಇಡೀ ದೃಶ್ಯದಲ್ಲಿ ದೇವರು ಸೃಷ್ಟಿಗೊಂಡ ರೀತಿ ಮತ್ತು ಅದಕ್ಕೆ ಕಾರಣಕರ್ತರಾಗಿ ಇಂದಿಗೂ ತಮ್ಮದೇ ಆದ ಮೇಲುಗೈಯನ್ನು ಸಾಧಿಸಿರುವ ರಾಜ ಮತ್ತು ಪುರೋಹಿತರ ನಡೆಯನ್ನು ಕಾಣಬಹುದು. ಕೊನೆಗೆ ತಿರುಕನಿಗೆ 'ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ' ಎಂದು ಹೇಳುವುದರ ಮೂಲಕ ಜಲಗಾರನೇ ಅವನ ಸಹಾಯಕ್ಕೆ ನಿಲ್ಲುತ್ತಾನೆ. ಅದೂ ಅಲ್ಲದೆ 'ನನ್ನನ್ನದೊಳೆ. ಮುಷ್ಟಿ ನಿನಗಿಕ್ಕಿ, ಶಿವಪೂಜೆ ಮಾಡುವೆನು' ಎನ್ನುವುದರ ಮೂಲಕ 'ದರ್ಮ'ದ ಕೆಲಸ ಯಾವುದೆಂಬುದನ್ನು ತನ್ನ ನಡೆಯಲ್ಲೂ ತೋರ್ಪಡಿಸುತ್ತಾನೆ. ಒಬ್ಬರಿಗೆ ಕಣ್ಣು ಕುರುಡಾಗಿದೆ; ಇನ್ನೊಬ್ಬರಿಗೆ ಮನಸ್ಸೇ ಕುರುಡಾಗಿದೆ ಎಂಬುದನ್ನು ಈ ಸನ್ನಿವೇಶ ಎತ್ತಿ ತೋರಿಸುತ್ತದೆ. ಜಗತ್ತಿನಲ್ಲಿ ಬಡವರಿಗೆ ಬಡವರೇ ಮರುಗುತ್ತಾರೆ ಮತ್ತು ಮರುಗಬೇಕಾಗುತ್ತದೆ ಎಂಬ ಅನಿವಾರ್ಯ ಪರಿಸ್ಥಿತಿಯನ್ನು ಈ ಸನ್ನಿವೇಶ ಅರ್ಥ ಮಾಡಿಸುತ್ತಿದೆ ಅನಿಸುತ್ತಿದೆ.

ಇಡೀ ನಾಟಕದಲ್ಲಿ ಬಹಳ ಮುಖ್ಯವಾದ ಸನ್ನಿವೇಶ ಎರಡನೆಯ ದೃಶ್ಯ. ಈ ದೃಶ್ಯವೂ ಕೂಡ ಪ್ರಕೃತಿಯ ಮಡಿನಿಂದಲೇ ಪ್ರಾರಂಭಗೊಂಡು ಶಿವಗುಡಿಯಿಂದ ಬಂದ ರೈತ ಮತ್ತು ಕಾಯಕ ನಿರತ ಜಲಗಾರನ ಮಾತುಗಳ ಮೂಲಕವೇ ಪ್ರಾರಂಭಗೊಳ್ಳುತ್ತದೆ. 'ಶಿವನ ಗುಡಿಯಿಂದೇನು ತಂದಿರುವೆ' ಎನ್ನುವ ಜಲಗಾರನ ಮಾತಿಗೆ ಹಲವು ಉತ್ತರ ಕೊಟ್ಟ ರೈತ 'ಶಿವನ ತರಲಿಲ್ಲವೇ' ಎನ್ನುವ ಅವನ ಪ್ರಶ್ನೆಗೆ 'ಮರುಳ ಜಲಗಾರ, ನಿನ್ನೊಡನೆ ಮಾತೇಕೆ' ಎನ್ನುವುದರ ಮೂಲಕ ಅಲ್ಲಿಂದ ಹೊರಟುಹೋಗುತ್ತಾನೆ. ಸ್ಥಾವರವಾಗಿರುವ ಎಲ್ಲ ದೇವಾಲಯಗಳ ಪರಿಸ್ಥಿತಿಯನ್ನು ಈ ಮೂಲಕ ನಾಟಕ ವ್ಯಂಗ್ಯದ ಮಾತುಗಳಲ್ಲಿ ತಿವಿಯುತ್ತದೆ. ಅಷ್ಟೇ ಅಲ್ಲ ದೇವಾಲಯದೊಳಗಿನ ಪಾರ್ವರು ನಡೆಸುವ ಎಲ್ಲ ದಂಧೆಯನ್ನು ನಾಟಕ ಅವರ ಮಾತುಗಳಲ್ಲೇ ಹಿಡಿದಿಡುತ್ತದೆ. ಇದೆಲ್ಲವನ್ನು ಮನಗಂಡೇ ಜಲಗಾರ ತನ್ನ ಶಿವನನ್ನು ತನ್ನ ಕಾಯಕದಲ್ಲಿ ಹುಡುಕಲು ಪ್ರಯತ್ನಿಸುತ್ತಾನೆ. ದೇವರ ಅಸ್ತಿತ್ವವನ್ನು ದೇವಾಲಯದಲ್ಲಿ ಹುಡುಕಿ ತಿರುಗಿ ಬಸವಳಿವವರು ಇಂದಿಗೂ ಇದ್ದಾರೆ. ನಿತ್ಯ ನಿರಂತರ ದೇವಾಲಯಗಳಿಗೆ ಎಡತಾಕುವವರ ಸಂಖ್ಯೆ ದಿನೇ ದಿನೆ ಹೆಚ್ಚಾಗುತ್ತಿದೆ. ಇಂತಹ ಸಂದರ್ಭದಲ್ಲೂ ಈ ನಾಟಕ ವಾಸ್ತವವನ್ನು ಬಿಚ್ಚಿಡುವ ಪರಿ ಅನನ್ಯವಾದದ್ದು. ಇದನ್ನು ಜಲಗಾರನ ಮಾತುಗಳಲ್ಲೇ ಹೇಳುವುದಾದರೆ...

ಅಲಿ ಗಯಾ ಪೂರಿ ಕಾಶಿಯಾತ್ರೆ ಜಾತ್ರೆ
ನಾನೊಂದನೊಲ್ಲೆ ; ನೀನೆ ಎಲ್ಲ ದೇವ !
ಅನಾದಿ ದೇವ ನಿನ್ನ ಸೇವೆಯೊಂದೆ ಸಾಕೆನಗೆ !
ಎನ್ನಂತರಂಗದಲ್ಲಿ ನಿಂತು ನೀನು ಮೈದೋರೈ !

ಇದು ದೇವರನ್ನು ಹುಡುಕುವ ಪರಿ. ಕಾಶೀಗೆ ಹೋಗಲಿಕ್ಕೆ ಏಸೊಂದು ದಿನ ಬೇಕು. ಕಾಶಿ ಕುಂತವ್ಗೆ ನನ್ನ ಹಡೆದವ್ವ' ಎನ್ನುವ ಜನಪದರ ಅಚಲ ವಿಶ್ವಾಸ ಇಲ್ಲಿ ಮನೆಮಾಡಿದೆ. ಇವತ್ತು ಎಲ್ಲ ದೇವಾಲಯಗಳು ವ್ಯಾಪಾರಿ ಕೇಂದ್ರಗಳಾಗಿ ಪರಿಣಮಿಸುತ್ತಿವೆ. ಉಳ್ಳವರ ತಾಣಗಳಾಗಿ ಇಲ್ಲದವರನ್ನು ದೋಚುವ ಮತ್ತಷ್ಟು ಶೋಷಣೆಗೆ ಒಳಪಡಿಸುವ ಹುನ್ನಾರದ ಸಂಚೂ ಇಲ್ಲಿ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ನಾಟಕ ಇವತ್ತಿಗೂ ಪ್ರಸ್ತುತವಾಗುವಂತೆ ದೇವರ ಅಸ್ತಿತ್ವವನ್ನು ಭಿನ್ನವಾಗಿ ನಿಲ್ಲಿಸುತ್ತದೆ. ಮೇಲಿನ ಸಾಲುಗಳು ಇಂತಹ ಭಿನ್ನ ದನಿಗೆ ಬಹಳ ಒತ್ತನ್ನು ನೀಡುತ್ತವೆ. ಈ ದನಿಯಿಂದಾಗಿಯೇ ನಾಟಕದಲ್ಲಿ ಜಲಗಾರನ ಹತ್ತಿರ ಜಲಗಾರನ ವೇಷವನ್ನು ಧರಿಸಿದ ಶಿವನು ಪ್ರತ್ಯಕ್ಷನಾಗುತ್ತಾನೆ. ಕನ್ನಡ ಸಾಹಿತ್ಯವಷ್ಟೇ ಅಲ್ಲ ಪುರಾಣ, ವೇದ, ಶಾಸ್ತ್ರಗಳಿಗೂ ಮಿಗಿಲಾಗಿ ಜಲಗಾರನ ವೇಷ ತೊಟ್ಟು ಶಿವನು ಪ್ರತ್ಯಕ್ಷನಾಗಿದ್ದು ಇದೇ ಮೊದಲ ಬಾರಿ. ಕೂಗುಮಾರಿ ಸಂಸ್ಕೃತಿಯೊಂದು ಬೀಡುಬಿಡುತ್ತಿರುವ ಈ ಸಂದರ್ಭದಲ್ಲಿ ಜಗದ ಜಲಗಾರನಾದ ಶಿವನ ವೇಷವನ್ನು ಎಲ್ಲರೆದೆಗೆ ಬಿತ್ತಬೇಕಾದ ಅನಿವಾರ್ಯ ಪರಿಸ್ಥಿತಿಯನ್ನೂ ಇದು ತೋರಿಸುತ್ತಿದೆ.

ಪ್ರತ್ಯಕ್ಷನಾದ ಶಿವನಿಗೆ ಸ್ಪಷ್ಟತೆಯಿದೆ. ತಾನು ಯಾರ ಶಿವನೆಂಬುದು. 'ಬಿಜ್ಜೆವಳೆರಾ ಕವಡು ಬಣ್ಣನೆಯ ನಂಬದಿರು' ಎನ್ನುತ್ತಲೇ ಶಿವ ಜಲಗಾರನಿಗೆ ತನ್ನನ್ನು ನಿರೂಪಿಸಿಕೊಳ್ಳುವ ಪರಿ ಹೀಗಿದೆ;

ಸೋದರನೆ, ಶಿವನು ಶಾಸ್ತ್ರಿಗಳ ಶಿವನಲ್ಲ !
ಕಾವ್ಯಗಳ ಶಿವನಲ್ಲ ! ಕವಿತೆಯಾ ಶಿವನಲ್ಲ !
ಬೆಳ್ಳಿಬೆಟ್ಟದ ಮೇಲೆ ಗಿರಿಜೆಯೊಡಗೂಡಿ
ಸರಸವಾಡುವ ರಸಿಕ ಶಿವನಲ್ಲ ! ಬ್ರಹ್ಮಾಂಡ
ಒತ್ತುತ್ತಿಹ ಕಸದ ರಾಶಿಯ ಮೇಲೆ ಹತ್ತಿ
ನಿಂತು, ನರ್ತನವೆಸಗುತಿಹ ತೋಟಿ ನಾನು !
ನಿಜಶಿವನು ಜಲಗಾರ ! ನಿನ್ನ ಮುಂದಿಹನು, ನೋಡು !

ಯಾವ ಸಂಸ್ಕೃತಿ ಶಿವನನ್ನು ಕುರಿತು ವೈಭವದ ವರ್ಣನೆಯನ್ನು ನೀಡಿತ್ತೋ ಅಂತಹ ಸಂಸ್ಕೃತಿಯೊಂದಿಗಿನ ಮುಖಾಮುಖಿ ಶಿವನ ಮೂಲಕವೇ ಇಲ್ಲಿ ನಡೆಯುತ್ತಿದೆ. ರಜತ ಗಿರಿಯ ಒಡೆಯ, ಕೈಲಾಸ ಪತಿ, ಮುಕುಟದಲಿ ಹಿಮಕರನ ತೊಟ್ಟ ಶಶಿಧರ, ಕೊರಳಿನಲಿ ಹಾವುಳ್ಳ, ಹಣೆಯಲ್ಲಿ ಕಣ್ಣುಳ್ಳ, ಇಷ್ಟೆಲ್ಲ ಉಳ್ಳ ಗಿರಿಜಾರಮಣನನ್ನು ಇದ್ದಕ್ಕಿದ್ದಂತೆ ಬಯಲಿಗೆ ತಂದು ಅವನ ಕೈಯಲ್ಲಿ ಪೊರಕೆ ಕೊಟ್ಟು 'ಬ್ರಹ್ಮಾಂಡ ಒತ್ತುತ್ತಿಹ ಕಸದ ರಾಶಿಯ ಮೇಲೆ ಹತ್ತಿ, ನಿಂತು, ನರ್ತನವೆಸಗುತಿಹ ತೋಟಿ ನಾನು' ಎಂದು ಹೇಳಿಸುವುದರ ಮೂಲಕ ಈ ಕೃತಿ ವರ್ಣವ್ಯವಸ್ಥೆ ಕಟ್ಟಿದ ಎಲ್ಲ ಆಲೋಚನಾ ಕ್ರಮಗಳನ್ನು ಕುಟ್ಟಿ ಪುಡಿಮಾಡಿಬಿಡುತ್ತದೆ. ಇಷ್ಟೇ ಅಲ್ಲ ಶಿವನು ತನ್ನ ಇರುವಿಕೆಯನ್ನು ಕುರಿತು

ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ !
ಉಳುತಿರುವ ಒಕ್ಕಲಿಗನೆದೆಯಲ್ಲಿ ನಾನಿರುವೆ !
ಎಲ್ಲಿ ಹೊಲೆಯನು ನನ್ನ ಕಾರ್ಯದಲಿ ತೊಡಗಿಹನೊ
ಅಲ್ಲಿ ನಾನವನ ಪಕ್ಕದೊಳಿರುವೆ.

ಇದನ್ನು ಈ ಜಗತ್ತಿನಲ್ಲಿ ಯಾರಾದರೂ ಹೇಳಿರುವುದುಂಟೆ? ಜಾತಿ ಮೀರಿದ ಪ್ರೀತಿ, ಕಾಯಕ ನಿರತರೆಡೆಗಿನ ತನ್ನೊಲವು. ಇವು ಶಿವನ

ನಿಜಾಭರಣಗಳು. ಈ ಹಿನ್ನೆಲೆಯಲ್ಲಿ ಶಿವನು ಪ್ರತ್ಯಕ್ಷನಾಗಿ ಜಲಗಾರನೊಂದಿಗೆ ನಡೆಸಿದ ಸಂಭಾಷಣೆ ಅತ್ಯಂತ ಮಹತ್ವದ್ದು. ಜಲಗಾರ ಇಡೀ ನಾಟಕದ ಉದ್ದಕ್ಕೂ ಒಂದು ರೀತಿಯ ನೈತಿಕತೆಯ ಪಾಠವನ್ನು ಎಲ್ಲರಿಗೂ ಹೇಳಿಕೊಡುತ್ತಾನೆ. ಮೊದಲು ರೈತನಿಗೆ, ನಂತರ ತರುಣರಿಗೆ, ಹಾರುವರಿಗೆ ಎಲ್ಲರಿಗೂ.... ಈ ಮೂಲಕ ಕಟ್ಟಕಡೆಯವರ ದಟ್ಟ ಅನುಭವವನ್ನು, ಅವರ ತಾತ್ವಿಕತೆಯನ್ನು ಈ ದೇಶ ಅರ್ಥ ಮಾಡಿಕೊಂಡು ಬಳಸಿದರೆ ದೇಶ ಅಭಿವೃದ್ಧಿ ಕಾಣಲು ಸಾಧ್ಯ ಎಂಬುದನ್ನು ನಾಟಕ ತನ್ನಿಡೀ ಮಾತುಗಳ ಪ್ರತಿಧ್ವನಿಸಿದಂತೆ ಕಂಡುಬರುತ್ತದೆ.

ವರ್ಣ ವ್ಯವಸ್ಥೆ ಕಟ್ಟಿದ ಜಾತಿ, ಮೇಲು ಕೀಳು, ದೇವರ ಅಸ್ತಿತ್ವ, ಅಸಮಾನತೆ ಎಲ್ಲದರ ವಿರುದ್ಧ ಮುಖಾಮುಖಿಯಾಗಿ ನಿಲ್ಲುವ ಈ ನಾಟಕ ಜಲಗಾರನ ಮೂಲಕ ಜೀವಪರ ನಿಲುವು ಯಾವುದು ಎಂಬುದನ್ನು ಸ್ಪಷ್ಟವಾಗಿ ಕಡೆದು ನಿಲ್ಲಿಸಿದೆ. ಇಂದಿಗೂ ತಾರತಮ್ಯವನ್ನೇ ಉಸಿರಾಗಿಸಿಕೊಂಡು ಜೀವಿಸುವವರು ಇದನ್ನು ಓದಿ ಅರ್ಥಮಾಡಿಕೊಂಡರೆ ಈ ನೆಲದಲ್ಲಿ ಮನುಷ್ಯರಾಗಿ ಬಾಳಲು ಖಂಡಿತಾ ಅರ್ಹರಾಗುತ್ತಾರೆ. ಇಲ್ಲದಿದ್ದರೆ ವರ್ಣದ ಕೊಚ್ಚೆ ಗುಂಡಿಯಲ್ಲಿ ಬಿದ್ದು ಸಾಯುವ ಹುಳುವಾಗೇ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾರೆ. ಬಹುಶಃ ಈ ಕೃತಿ ಇತ್ತೀಚಿನ ದಿನಗಳಲ್ಲಿ ಪ್ರಕಟಗೊಂಡಿದ್ದರೆ ಕೃತಿಯ ವಿರುದ್ಧ ಅದೆಷ್ಟು ಕೂಗುಮಾರಿಗಳು ಕೂಗುತ್ತಿದ್ದರೋ ಗೊತ್ತಿಲ್ಲ! ಅಂದು ಇದ್ದ ಸಹಿಷ್ಣುತೆ ಮನೋಭಾವಗಳು ಇದನ್ನು ಯಾರ ಹಂಗಿಲ್ಲದೆ ಸ್ವೀಕರಿವೆ. ಇಂತಹ ಮನಸ್ಸುಗಳನ್ನು ಕಟ್ಟುವ ಕೆಲಸವನ್ನು ಈ ಕೃತಿಯ ನಿರಂತರ ಓದಿನ ಮೂಲಕ ಪುನರ್ ರೂಪಿಸಬೇಕಿದೆ.